PW : 1

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## OS No.43/2023

ದಿನಾಂಕಃ 18.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರೆದ ಮುಖ್ಯವಿಚಾರಣೆಃ**

ನಾನು ಈ ಕೆಳಕಂಡಂತೆ ಹಣ ಪಾವತಿಯ ಬಗ್ಗೆ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ7** ಎಂದು ಗುರುತಿಸಲಾಯಿತು.

**ಪಾಟಿಸವಾಲು 5 ನೇ ಪ್ರತಿವಾದಿ ಪರ ಶ್ರೀ URK ವಕೀಲರಿಂದಃ**

ನಮಗೆ ದಾವಾ ಆಸ್ತಿಯು ತಂದೆಯಿಂದ ನನ್ನ ತಂದೆ ತೀರಿಹೋಗುವ ಮೊದಲೇ ಬಂದಿರುತ್ತದೆ. ನಮ್ಮ ತಂದೆಗೆ LRYT ಆದೇಶದನ್ವಯ ಬಂದಿರುತ್ತದೆ. ಸದರಿ ಆಸ್ತಿ ನಮ್ಮ ಕುಟುಂಬದ್ದು ಎಂದರೆ ಸರಿ. ನನ್ನ ತಂದೆ ಮತ್ತು ತಾಯಿಗೆ ನಾವು ಒಟ್ಟು 7 ಜನ ಮಕ್ಕಳಿರುತ್ತೇವೆ. ನಾನು, 1ರಿಂದ 5 ನೇ ಪ್ರತಿವಾದಿಗಳು ಮತ್ತು ಜನಾರ್ಧನ ನಮ್ಮ ತಂದೆ ತಾಯಿಯ ಮಕ್ಕಳಾಗಿರುತ್ತೇವೆ. ಸದರಿ ಆಸ್ತಿ ಜಂಟಿಯಾಗಿ ಎಲ್ಲರ ಹೆಸರಿಗೂ ಬಂದಿರುತ್ತದೆ ಎಂದರೆ ಸರಿಯಲ್ಲ. ಜನಾರ್ಧನ ಮತ್ತು ನನಗೆ ಬಂದಿರುತ್ತದೆ ಎನ್ನುತ್ತಾರೆ. ನನ್ನ ತಂದೆ ಯಾವಾಗ ತೀರಿಕೊಂಡರು ಎಂದರೆ ನನಗೆ ನೆನಪಿಲ್ಲ. ನನ್ನ ತಾಯಿ ನನ್ನ ತಂದೆ ತೀರಿಹೋದ ನಂತರ ತೀರಿಕೊಂಡಿರುತ್ತಾರೆ, ಯಾವಾಗ ಎಂದು ಗೊತ್ತಿಲ್ಲ. LRYT ಆದೇಶವಾಗುವ ಸಂದರ್ಭದಲ್ಲಿ ಸದರಿ ಆಸ್ತಿ ಎಲ್ಲರ ಹಕ್ಕಿಗೂ ಒಟ್ಟಿಗೆ ಜಂಟಿಯಾಗಿ ಬಂದಿರುತ್ತದೆ. ಜನಾರ್ಧನ ಮತ್ತು ನನಗೆ ಮಾತ್ರ ಸದರಿ ಆಸ್ತಿಯಲ್ಲಿ ಹಕ್ಕಿದ್ದು, 5

PW : 1

ನೇ ಪ್ರತಿವಾದಿ ಮತ್ತು ಆಸ್ತಿಗೆ ಯಾವುದೇ ಸಂಬಂಧ ಇಲ್ಲ. ಪ್ರಮಾಣಪತ್ರವನ್ನು ನಾನು ಹೇಳಿದಂತೆ ವಕೀಲರು ತಯಾರಿಸಿರುತ್ತಾರೆ.

ಜನಾರ್ಧನ ಆಚಾರ್ಯ ಸುಳ್ಯದಲ್ಲಿ ಕೆಲಸ ಮಾಡುತ್ತಿದ್ದರು. ಜನಾರ್ಧನ ಆಚಾರ್ಯ 5ನೇ ಪ್ರತಿವಾದಿಗಿಂತ ದೊಡ್ಡವರು. ಜನಾರ್ಧನ ಆಚಾರ್ಯ ಮತ್ತು ನನಗೆ ಒಳ್ಳೆಯ ಸಂಬಂಧ ಇತ್ತು ಎಂದರೆ ಸರಿ. 5ನೇ ಪ್ರತಿವಾದಿ ದಿನಾ ಕುಡಿದು ಬಂದು ಗಲಾಟೆ ಮಾಡುತ್ತಿದ್ದುದ್ದರಿಂದ ನಮ್ಮ ಸಂಬಂಧ ಸರಿಯಾಗಿರಲಿಲ್ಲ. ಜನಾರ್ಧನ ಆಚಾರ್ಯ 1996 ರಲ್ಲಿ ಕಾಣೆಯಾಗಿರುತ್ತಾರೆ. ಅದಕ್ಕೆ ಕಾರಣ ಗೊತ್ತಿಲ್ಲ. ನಾನು ಮತ್ತು ಜನಾರ್ಧನ ಆಚಾರ್ಯ 5ನೇ ಪ್ರತಿವಾದಿಗೆ ಹೊಡೆದು ಮನೆಯಿಂದ ಹೊರಗೆ ಹಾಕಿದ ವಿಚಾರ ಕರಾವಳಿ ಅಲೆ, ಸುದ್ದಿಬಿಡುಗಡೆ ಪತ್ರಿಕೆಯಲ್ಲಿ ದಿಃ02.10.1997 ರಂದು ಪ್ರಕಟವಾಗಿತ್ತು ಎಂದರೆ ಸುಳ್ಳು. 5ನೇ ಪ್ರತಿವಾದಿಗೆ ಯಾವುದೇ ಹಕ್ಕಿನ ಜಾಗವನ್ನು ಕೊಡಬಾರದು ಎಂಬ ದುರುದ್ದೇಶವನ್ನು ನಾನು ಹೊಂದಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು, ಪುತ್ತೂರು